International Journal of Kannada Research
www.kannadajournal.com

ISSN: 2454–5813
IJKR 2023; 9(2): 90-93
© 2023 IJKR
www.kannadajournal.com
Received: 16-02-2023
Accepted: 19-03-2023

**Dr. Arunakumari BN**
Assistant Professor,
Department of Kannada,
Government First Grade College
(Autonomus) Gubbi, Tumkur,
Karnataka, India

**Corresponding Author:**
**Dr. Arunakumari BN**
Assistant Professor,
Department of Kannada,
Government First Grade College
(Autonomus) Gubbi, Tumkur,
Karnataka, India

# ಕನ್ನಡ ಮಹಿಳಾ ಚಿಂತನ ಸಾಹಿತ್ಯ – ಒಂದು ಅವಲೋಕನ

**Dr. Arunakumari BN**

**ಪೀಠಿಕೆ**

ವಸಾಹತೋತ್ತರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶದಲ್ಲಿ ಆದಂತಹ ಅತ್ಯಂತ ಪ್ರಖರವಾದ ಬೆಳವಣಿಗೆ ಎಂದರೆ ಚಿಂತನ ಸಾಹಿತ್ಯದ ಬಹುಮುಖೀ ಪರಂಪರೆ ಮುನ್ನೆಲೆಗೆ ಬಂದದ್ದು.ಇದು ಕಥೆ, ಕಾದಂಬರಿ, ಕಾವ್ಯ, ನಾಟಕ ಹೀಗೆ ಸೃಜನಶೀಲ ಸಾಹಿತ್ಯದ ವಿಭಿನ್ನ ಪರಂಪರೆಯನ್ನೊಳಗೊಂಡಂತೆ ವಿಮರ್ಶೆಯ ಮುಖವಾಣಿಯಾಗಿ ಚಿಂತನಾ ಸಾಹಿತ್ಯವು ಸಾಂಸ್ಕೃತಿಕ ವೈವಿಧ್ಯತೆಯ ಭಿನ್ನ ರೂಪಗಳನ್ನು ಪ್ರಕಟಿಸುತ್ತದೆ ಎನ್ನುವುದು ಗಮನಾರ್ಹ ವಿಚಾರ.ಹಾಗೆ ನೋಡಿದರೆ, ಚಿಂತನ ಸಾಹಿತ್ಯವು ವಿಮರ್ಶೆಯ ಮರುಮುಖದ ರೂಪವಾಗಿ ಸೈದ್ಧಾಂತಿಕ ತಳಹದಿಯೊಂದಿಗೆ ಗುಣಾತ್ಮಕವಾಗಿ, ವೈವಿಧ್ಯಮಯವಾಗಿ ವಿಪುಲವಾದ ಸಾವಕಾಶವನ್ನು ಪಡೆದಿದೆ. ಇಂತಹ ಸಾಹಿತ್ಯ ಚಿಂತನೆಯನ್ನು ಸಾಂಪ್ರದಾಯಿಕ ನೆಲೆಗಳಿಂದ ಗುರುತಿಸಿಕೊಳ್ಳುವುದು ತುಸು ಕಷ್ಟಕರ..! ಕನ್ನಡದ ಮಟ್ಟಿಗಂತೂ ಚಿಂತನ ಸಾಹಿತ್ಯವು ಶುದ್ಧಾಂಗವಾಗಿ, ಸಾಹಿತ್ಯ ವಿಮರ್ಶೆಯಾಗಿಯೇ ಉಳಿದಿಲ್ಲ ಎನಿಸುತ್ತದೆ.ಏಕೆಂದರೆ, ಸಾಹಿತ್ಯ ಚಿಂತನ ಕ್ಷೇತ್ರಗಳಲ್ಲಿ ವೈಜ್ಞಾನಿಕ ದೃಷ್ಟಿಕೋನಗಳನ್ನು ಗುರುತಿಸಬಹುದಾದ ಅಧ್ಯಯನಗಳು ನಡೆದಿರುವುದು ತೀರಾ ಕಡಿಮೆ. ಇದುವರೆಗೂ ನಡೆದಿರುವ ಅಧ್ಯಯನಗಳನ್ನು ಗಮನಿಸಿದಾಗ ಸೃಜನಶೀಲ ಸಾಹಿತ್ಯವನ್ನಾಧರಿಸಿರುವ ಸ್ತ್ರೀ ಸಂವೇದನೆಯ ನೆಲೆಯಲ್ಲಿ ಹೆಚ್ಚಿನ ಪ್ರಮಾಣದ ಅಧ್ಯಯನಗಳು ಕಂಡು ಬಂದಂತೆ, ಮಹಿಳಾ ಚಿಂತನಾ ಸಾಹಿತ್ಯವನ್ನು ಒಳಗೊಂಡಂತೆ ನಿರ್ದಿಷ್ಟವಾದ ಪರಿಕಲ್ಪನಾತ್ಮಕ ಶೋಧನೆಗಳು ನಡೆದಿಲ್ಲ. ಈ ಕಾರಣಕ್ಕಾಗಿ ಪ್ರಸ್ತುತ ಬರವಣಿಗೆಯ ಕ್ಷೇತ್ರದಲ್ಲಿ ನಡೆದ ಹಲವು ಬಗೆಯ ವೈಚಾರಿಕ ದೃಷ್ಟಿಕೋನಗಳನ್ನು ಹೀಗೆ ಗುರುತಿಸಬಹುದು.

೧. ಕನ್ನಡ ಸೃಜನಶೀಲ ಸಾಹಿತ್ಯವನ್ನೊಳಗೊಂಡಂತೆ ನಡೆದಿರುವ ಸ್ತ್ರೀ ಚಿಂತನೆಯ ಅಧ್ಯಯನಗಳು.
೨. ಸಮಾಜ – ಸಂಸ್ಕೃತಿ– ರಾಜಕಾರಣವನ್ನಾಧರಿಸಿದ ಸಾಹಿತ್ಯಾತ್ಮಕ ಚಿಂತನೆಗಳು.

ಅಥವಾ

ಸೃಜನಶೀಲ ಸಾಹಿತ್ಯವನ್ನಾಧರಿಸಿದಂತಹ ವೈಚಾರಿಕ ಚಿಂತನೆಗಳು.
೩. ಸಾಹಿತ್ಯ ಮತ್ತು ಸಂಸ್ಕೃತಿಗಳ ಗತಿಶೀಲ ಚಲನೆಗಳ ಮುಖಾಮುಖಿ.

ನಿಜವಾದ ಮಾತಿನಲ್ಲಿ ಹೇಳುವುದಾದರೆ, ಸಾಹಿತ್ಯ ಚಿಂತನೆಯ ಈ ಮೂರು ದಾರಿಗಳು ವಸ್ತುಸಂಗತಿಯನ್ನು ಕುರಿತ ತ್ರಿವಿಧ ಅಧ್ಯಯನ ಕ್ರಮಗಳು.ಇಂತಹ ಅಧ್ಯಯನಗಳ ಒಡಲಿನಲ್ಲಿ ಪರಿಕಲ್ಪನಾತ್ಮಕವಾಗಿ ಮತ್ತೆರಡು ಆಯಾಮಗಳು ಪಡಿಮೂಡುವುದನ್ನು ಗುರುತಿಸಬಹುದು.

೧. ಪುರುಷ ಚಿಂತನೆಯಲ್ಲಿ ಮಹಿಳಾ ಖಜಜಟಿಣುಣಥಿಯ ಹುಡುಕಾಟ.
೨. ಮಹಿಳಾ ಚಿಂತನ ಸಾಹಿತ್ಯದಲ್ಲಿನ ಮಹಿಳಾ ಖಜಜಟಿಣುಣಥಿಯ ಹುಡುಕಾಟ.

ಇವನ್ನು ವಿಶಿಷ್ಟ ಆಲೋಚನಾ ಕ್ರಮ ಮತ್ತು ನಿರ್ದೇಶಿತ ಸೂತ್ರಗಳಂತೆ ವಿಷಯದ ಆಯ್ಕೆ ಹಾಗೂ ಪ್ರತಿಪಾದನೆಗಳಿಂದ ಸ್ಪಷ್ಟಪಡಿಸುವ ಕ್ರಮಗಳು ಎನ್ನಲಾಗುತ್ತದೆ.

ಹೀಗೆ ಸ್ತ್ರೀಯನ್ನು ಕುರಿತ ಈ ಬಗೆಯ ಚಿಂತನೆಗಳು ಸ್ತ್ರೀ ಸಾಹಿತ್ಯ ಮತ್ತು ಸ್ತ್ರೀಯನ್ನೊಳಗೊಂಡದ್ದಾಗಿರಬಹುದು ಅಥವಾ ಪುರುಷ ನಿರ್ಮಿತ ಸಾಹಿತ್ಯದಲ್ಲಿ ಅಥವಾ ಸ್ತ್ರೀ ಅಸ್ಮಿತೆಯನ್ನು ಒಳಗೊಂಡದ್ದಾಗಿರಬಹುದು.'ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು' ಎನ್ನುವ ಗಾದೆ ಮಾತಿನಂತೆ ಮಹಿಳಾ ಚಿಂತನ ನೆಲೆಯು ಸಾಹಿತ್ಯ ಪರಂಪರೆಯಲ್ಲಿ ಅಖಂಡ ಅನುಭವವನ್ನೊಳಗೊಂಡ

ಚಿಂತನೆಯಾಗಿದೆ.ಇದು ಏಕಕಾರಿಯಾದ ಚಿಂತನೆಯಾಗದೆ ಸಿದ್ಧಾಂತ, ಚರಿತ್ರೆ, ಸಂಸ್ಕೃತಿ, ಸಮಾಜ ಹೀಗೆ ಬೇರೆ ಬೇರೆ ರೂಪಗಳಲ್ಲಿ ಪರ–ವಿರೋಧದ ಅಧ್ಯಯನ ಕ್ರಮಗಳಲ್ಲಿ ಚರ್ಚಿತವಾಗುತ್ತದೆ.ವಿಶೇಷವೆಂದರೆ, ಮಹಿಳಾ ಚಿಂತನ ಸಾಹಿತ್ಯವು ಪುರುಷ ಮತ್ತು ಮಹಿಳಾ ಲೇಖಕರಲ್ಲಿ ಬೇರೆ ಬೇರೆ ಧಾರೆಗಳಲ್ಲಿ ಹಾಸು ಹೊಕ್ಕಾಗಿರುತ್ತದೆ.ಈ ರೀತಿಯ ಬಹುವಿಶಿಷ್ಟ ನೆಲೆಯಲ್ಲಿ ಮೂಡಿಬಂದ ಮಹಿಳೆಯರ ಚಿಂತನ ಸಾಹಿತ್ಯವನ್ನು ಪ್ರಮುಖವಾಗಿ ಅವಲೋಕಿಸಬಹುದಾಗಿದೆ.ಬದುಕಿನ ಅನುಭವವನ್ನು ಶೋಧಿಸಲು ಹೊರಟ ಪರಿಕಲ್ಪನಾತ್ಮಕ ನಿಲುವುಗಳನ್ನು ಹಾಗೂ ಅವರ ಒಟ್ಟಾರೆ ಚಿಂತನೆಯ ತಾತ್ವಿಕತೆಯನ್ನು ಹಿಡಿದಿಡುವ ಯತ್ನ ಚಿಂತನ ಸಾಹಿತ್ಯವಾಗಿದೆ.

ಕನ್ನಡ ಮಹಿಳಾ ಚಿಂತನ ಸಾಹಿತ್ಯ – ಹೀಗೆನ್ನುವಾಗ ಅದಕ್ಕೆ ಸಂಬಂಧಿಸಿದಂತೆ ಮಹಿಳಾ ಚಿಂತನ ಸಾಹಿತ್ಯದ ಮೇಲೆ ಮೂಡಿಬಂದಿರುವ ಅಧ್ಯಯನ ಕೃತಿಗಳ ಅವಲೋಕನವುಒಟ್ಟು ಚಿಂತನ ಸಾಹಿತ್ಯದ ಗುಣಾತ್ಮ ಗ್ರಹಿಕೆಗೆಯ ನೆರವಿನಂತಿರುತ್ತದೆ.ಅದು ಕನ್ನಡ ವಿಚಾರ ಸಾಹಿತ್ಯ ಮತ್ತು ಸ್ತ್ರೀ ಸಂವೇದನೆ ಎಂಬ ಜೋಡಿ ಕಲ್ಪನೆಗಳನ್ನು ಚರ್ಚೆಗೆ ಒಳಪಡಿಸುವ ಚಾರಿತ್ರಿಕ ಸನ್ನಿವೇಶದ ತಾತ್ವಿಕ ಆಕೃತಿಯಾಗಿ ಉನ್ನತೀಕರಣಗೊಳ್ಳುತ್ತದೆ.ಆ ಮೂಲಕ ಮಹಿಳಾ ಚಿಂತನ ಸಾಹಿತ್ಯದಲ್ಲಿ ಅನುಭವದ ಅಥವಾ ಚಿಂತನೆಯ ದ್ರವ್ಯವಾಗಿ ಅಭಿವ್ಯಕ್ತಿಗೊಂಡ ಸ್ತ್ರೀ ಸಂವೇದನೆಯ ನೆಲೆಗಳು – ಸ್ವರೂಪಗಳನ್ನು ನಿಶ್ಚಿತವಾಗುತ್ತವೆ.

ಕನ್ನಡದ ಮಹಿಳಾ ಚಿಂತನ ಸಾಹಿತ್ಯ ಅಧ್ಯಯನದ ವಿಶೇಷತೆ ಇರುವುದೇ ಅದು ಸೂಚಿಸುವ ವೈಚಾರಿಕ ಆಕೃತಿ ಮತ್ತು ಸಾರರೂಪಿ ಸಾಂಸ್ಕೃತಿಕ ಸಂಗತಿಗಳಿಂದ.ಚಿಂತನೆಯ ಪ್ರಭೆ–ಪ್ರತಿಭೆಗಳ ಮೇಲ್ನೋಟದ ಅಧ್ಯಯನ ಮಾಡಿದರೆ ಕೃತಿಯಲ್ಲಿ ಅಡಗಿ ಕೂತಿರುವ ಸಂವೇದನೆಯನ್ನು ತಾಕುವಂತಾಗುವುದಿಲ್ಲ ಎಂಬ ಈ ನಿಲುವಿನಲ್ಲಿ ಪ್ರಸ್ತುತ ಅವಲೋಕನಕ್ಕೆ ಸಂಬಂಧಿಸಿದ ಚಿಂತನ ಕೇಂದ್ರಿತ ಅಧ್ಯಯನಗಳು ಆಗಿರುವುದು ತೀರಾ ಅತ್ಯಲ್ಪ ಎನಿಸುತ್ತದೆ. ಅವುಗಳನ್ನು ಈ ರೀತಿ ಗಮನಿಸಬಹುದು:

ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ – ಇದೊಂದು ವ್ಯಕ್ತಿಕೇಂದ್ರಿತ ಅಧ್ಯಯನವಾಗಿದೆ. ಹಿರಿಯ ತಲೆಮಾರಿನ ಮಹಿಳಾ ಚಿಂತಕಿಯಾದ ವಿಜಯಾದಬ್ಬೆ ಅವರ ಸೃಜನ ಮತ್ತು ಸೃಜನೇತರ ಸಾಹಿತ್ಯ ಬರಹಗಳನ್ನು ವೈಚಾರಿಕ ಪ್ರಜ್ಞಾಸ್ತರಕ್ಕೆ ಮುಖಾಮುಖಿಯಾಗಿಸುವಂತಹ ಅಧ್ಯಯನವಾಗಿದೆ.ಇಲ್ಲಿ ವಿಜಯಾದಬ್ಬೆಯವರ ಸೃಜನೇತರ ಬರಹಗಳ ವೈಚಾರಿಕ–ವೈಜ್ಞಾನಿಕ ಪ್ರಜ್ಞೆಯಂತಿರುವ ಅವರ ಬರಹವನ್ನು ವಿವರಣಾತ್ಮಕವಾಗಿ ಪರಿಚಯಿಸಲಾಗಿದೆ.ಅಷ್ಟೇ ಅಲ್ಲದೆ ಅವರ ಚಿಂತನಾತ್ಮಕ ಬರಹಗಳಲ್ಲಿ ತಾತ್ವಿಕ ಸತ್ಯವೆನಿಸುವ ಸ್ತ್ರೀ ಸಂಗತಿಗಳನ್ನು ತಾರ್ಕಿಕವಾಗಿ ಎದುರುಬದುರಾಗಿಸಲಾಗಿದೆ.ಅಂದರೆ ನಿಜವಾದ ತಾತ್ವಿಕನ ಚಿಂತನಾ ಕ್ರಮಗಳು ಸತ್ಯದ ಪೃಥಕ್ಕರಣೆಗೆ ಹೇಗೆ ಪ್ರತಿಸ್ಪಂದಿಸುತ್ತವೆ ಎನ್ನುವುದರ ತೀಕ್ಷ್ಣ ವಿಮರ್ಶಾತ್ಮಕ ನಿಲುವು ಈ ಬರಹದಲ್ಲಿ ಅನುರಣನಗೊಂಡಿದೆ.

'ಡಾ. ಮಲ್ಲಿಕಾ ಘಂಟಿ ಅವರ ಬದುಕು ಹಾಗೂ ಸಾಹಿತ್ಯ' ಎನ್ನುವ ಪ್ರಭುಸ್ವಾಮಿ ಹೆಗ್ಗೂರೂರ ಅವರ ಈ ಅಧ್ಯಯನವು ವ್ಯಕ್ತಿ ಕೇಂದ್ರಿತ ಅಧ್ಯಯನಕವಾಗಿದ್ದು, ಚಿಂತನ ಸಾಹಿತ್ಯದ ಪ್ರಮುಖ ಲೇಖಕಿಯಾದ ಮಲ್ಲಿಕಾ ಘಂಟಿಯವರ ಒಟ್ಟು ಸಾಹಿತ್ಯ ಬರಹದ ಪರಿಚಯಾತ್ಮಕ ವಿಧಾನವನ್ನು ಒಳಗೊಂಡಿದೆ.ಸಮಕಾಲೀನ ಹಾಗೂ ಪ್ರಸ್ತುತದ ಹಲವು ನಿಜಗಳಿಗೆ ಮೈಯೊಡ್ಡಿ ನಿಲ್ಲುವ ಮಲ್ಲಿಕಾ ಘಂಟಿ ಅವರ ಸಂವೇದನೆಯ ಆರೋಗ್ಯಪೂರ್ಣ ಆಶಯವನ್ನು ಕೆಲವು ಹೊಸ ಪರಿಕಲ್ಪನೆಗಳ ಅಡಿಯಲ್ಲಿ ಕಟ್ಟಿಕೊಡುವ ಪ್ರಯತ್ನ ಈ ನಿಬಂಧದ ಮೂಲಕ ಆಗಿದೆ.ಈ ಹೊತ್ತಿನಲ್ಲಿ ಜಾಗತಿಕವಾಗಿ ತಲೆದೋರಿರುವ ಹೊಸ ಬಗೆಯ ಸಮಸ್ಯೆಗಳಿಗೆ ಮುಖಾಮುಖಿಯಾಗುವ, ಪರಿಹಾರಗಳನ್ನು ಶೋಧಿಸುವ ನೆಲೆಗಳನ್ನು ವಿಶೇಷವಾಗಿ ಪರೀಕ್ಷಿಸಲಾಗಿದೆ.ವೈಜ್ಞಾನಿಕ ಹಾಗೂ ವೈಚಾರಿಕತೆಯ ಬೆಳಕಿನಲ್ಲಿ ಸಮಕಾಲೀನ ಆಗು ಹೋಗುಗಳನ್ನು ಜೀವಂತವಾಗಿರಿಸಿರುವ ಇವರ ಸಾಹಿತ್ಯವನ್ನು ಕುರಿತು ಅಧ್ಯಯನ ಇದಾಗಿದೆ.ಹಾಗೆಯೇ ಪ್ರತಿರೋಧದ ಚೈತನ್ಯದ ಗಂಗೆಯಂತಿರುವ ಇವರ ಸಾಹಿತ್ಯವು ಜೀವಪರ ಚೈತನ್ಯವನ್ನು, ಸ್ತ್ರೀಪರ ಸಂವೇದನೆಯನ್ನು ಹೆಣ್ಣಿನ ಸವಾಲು ಮತ್ತು ಸಂದಿಗ್ಧತೆಗಳನ್ನು ಮುಖಾಮುಖಿಯಾಗಿಸುವ ಪ್ರತಿರೋಧದ ಚಿಂತನೆಯಂತೆ ಈ ಅಧ್ಯಯನವು ಸಾಗಿದೆ.ಆದಾಗ್ಯೂ ಇವರ ಚಿಂತನಾತ್ಮಕ ಬರಹಗಳ ಚರ್ಚೆಗಳು ಮತ್ತು ಅವುಗಳ ತಾತ್ವಿಕ ನಾದದ ಬೆನ್ನೇರುವ ನಿಲುವನ್ನು ಒಳಗೊಂಡಿದೆ. ಅಂತೆಯೇ ಮಹಿಳಾ ಸಂವೇದನೆಗಳು ಮಹಿಳಾ ವಿಮೋಚನೆ ಹಾಗೂ ಸಮಾನತೆಗಾಗಿ ಹೋರಾಟ, ದಲಿತ ಬಂಡಾಯ ಸಾಹಿತ್ಯದಲ್ಲಿ ಬದಲಾವಣೆ ಆಶಯ ಮತ್ತು ಸ್ತ್ರೀ, ಪ್ರಗತಿಶೀಲ ಕಥೆ, ಕಾದಂಬರಿಗಳಲ್ಲಿ ಸ್ತ್ರೀವಾದಿ ಪ್ರಜ್ಞೆ, ಮಹಿಳಾ ವಿಮೋಚನಾ ಚಳುವಳಿ ಮತ್ತು ಬಂಡಾಯ ಸಾಹಿತ್ಯ, ಕನ್ನಡ ರಂಗಭೂಮಿ ಮತ್ತು ಮಹಿಳೆ, ಮಹಿಳೆ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳು, ಬಂಡಾಯದ ಪ್ರಾತಿನಿಧಿಕ ಮಹಿಳೆ, ಹಾಲುಮತದ ಮಹಿಳೆಯರ ಸಾಧನೆ ಈ ಲೇಖನಗಳನ್ನು ಅವರು ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗುವಂತೆ ಚರ್ಚಿಸಿದ್ದಾರೆ.

'ಎಂ.ಎಸ್. ಆಶಾದೇವಿ ಅವರಸ್ತ್ರೀವಾದಿ ಚಿಂತನೆಯ ಸ್ವರೂಪ' ಎನ್ನುವ ಅಧ್ಯಯನವು ಎಚ್.ಎಸ್. ಸುಮಾ ಅವರದ್ದಾಗಿದೆ.ಇಲ್ಲಿ ತೀರಾ ಇತ್ತೀಚಿನವರೂ, ಸ್ತ್ರೀಯರ ವಿಷಯಗಳಿಗೆ ಎದುರುಬದುರಾಗಿ ನಿಲ್ಲುವವರೂ ಆದ ಆಶಾದೇವಿ ಅವರ ಸ್ತ್ರೀ ಚಿಂತನೆಯ ಒಲವು ನಿಲುವುಗಳನ್ನು ಎತ್ತಿಹಿಡಿಯಲಾಗಿದೆ.ವಾಸ್ತವವಾಗಿ ಸಿದ್ಧಾಂತಗಳ ವಿಷಯದಲ್ಲಿ ಹುಬ್ಬುಗಂಟಿಕ್ಕದ ಪ್ರಯೋಗಧಾರಿತವಾದ ಅವರ ಅಧ್ಯಯನದ ವಿಧಿ ವಿಧಾನಗಳನ್ನು ತಿಳಿಸುತ್ತದೆ.ಅಂತೆಯೇ ಸ್ತ್ರೀ ಸಂವೇದನಾತ್ಮಕ ಪರಿಕಲ್ಪನೆಯನ್ನು ಆವರಿಸಿದ ಈ ಅಧ್ಯಯನವು ಹೆಂಗಸರ ಬದುಕನ್ನು ಪ್ರಭಾವಿಸುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಕೌಟುಂಬಿಕ ಸಂಗತಿಗಳನ್ನು ಅರ್ಥಮಾಡಿಸುವಲ್ಲಿ ಪ್ರಮುಖವಾಗುತ್ತದೆ.ಮುಖ್ಯವಾಗಿ ಆಶಾದೇವಿಯವರ ಸ್ತ್ರೀ ಚಿಂತನೆಯ ವ್ಯಾಪ್ತಿ, ಸ್ವರೂಪ ಹಾಗೂ ಸೈದ್ಧಾಂತಿಕ ನಿಲುವುಗಳ ಕುರಿತು ಮಂಡಿಸುವಂತದ್ದಾಗಿದೆ.ಅಲ್ಲದೆ ಕನ್ನಡದ ಸ್ತ್ರೀ ಸಂವೇದನಾತ್ಮಕ ಚಿಂತನೆಗೆ ಆಶಾದೇವಿಯವರು ಕೊಡುವ ಹೊಸ ಹೊಸ ಆಯಾಮಗಳ ಶೋಧವೂ ಪ್ರಸ್ತುತ ಪ್ರಬಂಧದಲ್ಲಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸ್ತ್ರೀಯರ ಸಮಸ್ಯೆಗಳ ವೈವಿಧ್ಯಮಯ ಸ್ವಭಾವಗಳನ್ನು ನಿರಾಕರಿಸದೇ ಗುರುತರ ವ್ಯತ್ಯಾಸಗಳನ್ನು ಮಾಡಬಲ್ಲಂತಹ ಬಹುಮುಖಿ ಸವಾಲುಗಳ ಗ್ರಹಿಕೆಯ ಬಲದಂತಿರುವ ಈ ಅಧ್ಯಯನವು ಸ್ತ್ರೀ ಸಂವೇದನೆಯಲ್ಲಿ ಮತ್ತು ಅದರ ಚಿಂತನಾತ್ಮಕ ನಿರೂಪಣೆಯಲ್ಲಿ ವ್ಯಕ್ತವಾಗುವ ಶೈಲಿ, ಅಭಿವ್ಯಕ್ತಿಯ ವಿನ್ಯಾಸ, ಭಾಷಾ ಬಿಕ್ಕಟ್ಟು, ಪರಿಭಾಷಾ ಪರಿಕಲ್ಪನೆ, ಸೈದ್ಧಾಂತಿಕ ರೂಪುಗಳು ಮತ್ತು ಸಲಕರಣೆಗಳಂತೆ ಬಳಕೆಗೊಂಡಿರುವ ಬೌದ್ಧಿಕ ಸೂತ್ರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಅಲ್ಲದೆ ಸಾಂಸ್ಕೃತಿಕ ಪಠ್ಯಗಳು ಸಮಕಾಲೀನ ದೃಷ್ಟಿಕೋನಗಳನ್ನು ಮುಂದಿಡುವ ಸಮಗ್ರ ಆಕರಗಳು ಎನ್ನುವ ವೈಜ್ಞಾನಿಕ ತಾರ್ಕಿಕ ಸಮಸ್ಯೆಗಳ ಬಗೆಗಿನ ವಿಶೇಷ ಅರಿವನ್ನು ತಿಳಿಸಿಕೊಡುತ್ತದೆ. ಹಾಗಾಗಿ ಆಶಾದೇವಿಯವರ ಸ್ತ್ರೀ ಚಿಂತನೆಯ ಸಂಗತಿಗಳನ್ನು ಸಾಹಿತ್ಯಿಕ, ಸಾಮಾಜಿಕ, ಮತ್ತು ಸೈದ್ಧಾಂತಿಕ ಮಹತ್ವದೊಂದಿಗೆ ತಿಳಿಯುವ ಭಾಗವಾಗಿದೆ. ಹೀಗೆ ಹೇಳುವಾಗಲೂ ಅದರ ಮಿತಿಯನ್ನು ಗುರುತಿಸುವ ಸಂಗತಿಗಳ ಕಡೆಗೂ ದೃಷ್ಟಿ ಹಾಯಿಸಲಾಗಿದೆ.ಮುಂದುವರೆದು ಸ್ತ್ರೀವಾದಿ ಅಧ್ಯಯನದ ಭವಿಷ್ಯವು

ಯಾವ ಸಾಂಸ್ಕೃತಿಕ ಆಕರಗಳನ್ನು ಅವಲಂಬಿಸಿದೆ ಎಂಬುದರ ಕುರಿತು ಪುನರ್ ಮೌಲ್ಯಮಾಪನ ಮಾಡುವ ವಿಧಾನದಂತೆ ಈ ಅಧ್ಯಯನವು ಇದೆ.

'ಕನ್ನಡ ವಿಮರ್ಶೆಯಲ್ಲಿ ಮಹಿಳಾ ಚಿಂತನೆಯ ತಾತ್ತ್ವಿಕ ಆಯಾಮಗಳು' – ಸುಮ ಎಚ್.ಎಸ್. ಅವರ ಪಿಎಚ್‌ಡಿ ಸಂಶೋಧನಾ ಮಹಾಪ್ರಬಂಧ ಕೃತಿಯಾದ ಇದು ವಿಚಾರ ಕೇಂದ್ರಿತ ಹಾಗೂ ವಿಮರ್ಶ ಕೇಂದ್ರಿತ ಅಧ್ಯಯನವಾಗಿದೆ. ಈ ಅಧ್ಯಯನದಲ್ಲಿ ಸುಮ ಅವರು ಹೀಗೆ ಹೇಳುತ್ತಾರೆ; "ಕನ್ನಡ ವಿಮರ್ಶೆಯಲ್ಲಿ ಮಹಿಳಾ ಸಂವೇದನೆಯನ್ನು ರೂಪಿಸುವಲ್ಲಿ ಹಲವಾರು ವಿಮರ್ಶಕಿಯರು ತಮ್ಮ ಕೊಡುಗೆ ನೀಡಿದ್ದಾರೆ.ಸಾಹಿತ್ಯದಲ್ಲಿ ಸೀಮಿತಗೊಳಿಸಿ ಚಿತ್ರಿಸುತ್ತಿರುವುದನ್ನು, ತನ್ನ ಹಿತಾಸಕ್ತಿಗೆ ತಕ್ಕಾ ಹಾಗೇ ಮಹಿಳೆಯ ವ್ಯಕ್ತಿತ್ವವನ್ನು ತಿರುಚುತ್ತಿರುವುದನ್ನು ಬಯಲು ಮಾಡುವ ಮೂಲಕ ವಿಮರ್ಶೆಗೆ ಒಂದು ತಾತ್ವಿಕ ಚೌಕಟ್ಟನ್ನು ರೂಪಿಸುತ್ತಿದ್ದಾರೆ.ವಿಮರ್ಶಕಿಯರು ಈ ಕೆಲಸವನ್ನು ವಿಮರ್ಶೆ ಮತ್ತು ಅನುವಾದ ಕೃತಿಗಳ ಮೂಳಕ ಮಹಿಳಾ ಚಿಂತನೆಯನ್ನು ರೂಪಿಸುತ್ತಿದ್ದಾರೆ"[1] ಎಂದು ಹೇಳುತ್ತಾ ಆಧುನಿಕ ಸಂದರ್ಭದ ಬೇರೆ ಬೇರೆ ಚಿಂತಕರ ಚಿಂತನೆಗಳನ್ನು ಸಾಮಾಜಿಕವಾಗಿ ನಿರ್ಣಾಯಕ ನೆಲೆಯಲ್ಲಿ ಚರ್ಚೆಗೆ ಒಳಗಾಗುವ ಹಲವಾರು ಬಿಕ್ಕಟ್ಟುಗಳ ಮೇಲೆ ಬೆಳಕು ಚೆಲ್ಲುತ್ತಾರೆ.ಸಮಾಜದಲ್ಲಿ ಮಹಿಳೆಯು ಎದುರಿಸುತ್ತಿರುವ ಬಿಕ್ಕಟ್ಟುಗಳ ಮೇಲೆಯೂ ದೃಷ್ಟಿ ಹಾಯಿಸುತ್ತಾರೆ.ಅದರಲ್ಲೂ ವಿಶೇಷವಾಗಿ ಜಾತಿ ಪದ್ಧತಿಯ ಮನೋಭಾವ, ಪರಂಪರೆಯ ಮೌಲ್ಯ, ಹೆಣ್ಣಿನ ಪಾತ್ರೌಚಿತ್ಯದ ಪ್ರಶ್ನೆ, ತಾತ್ತ್ವಿಕ ಸತ್ಯದ ಭಾವನೆ, ಪ್ರಗತಿ, ಅಭಿವೃದ್ಧಿ ಮತ್ತು ಆಧುನಿಕತೆಯ ಸಂಗತಿಗಳು, ಇನ್ನು ಮರುತ್ತರವಾದ ವ್ಯಕ್ತಿಯ ಸ್ವವಿಚಾರಗಳ ಸುತ್ತ ಪರಿಭ್ರಮಿಸುತ್ತದೆ. ಈ ಸಂಶೋಧನೆಯು ವ್ಯಕ್ತಿಯ ಅಸ್ತಿತ್ವಾತ್ಮಕ ಪ್ರಶ್ನೆಗಳು ಮತ್ತು ತಾತ್ತ್ವಿಕ ನಿಲುವುಗಳ ನೆಲೆಯಿಂದ ಆರಂಭಿಸಿ ಸಾಮಾಜಿಕ ನಿಯತಿಯವರೆಗೆ ಸಮುದಾಯದ ಬದುಕಿನ ಪ್ರತಿಯೊಂದು ಅಂಶವನ್ನು ಇಲ್ಲಿನ ಚಿಂತನೆಗಳು ಪ್ರಶ್ನಿಸುತ್ತವೆ. ವಿಚಾರಣೀಯ ವಿಧಾನದ ಮೇಲೆ ಪ್ರಾಬಲ್ಯ ಬೀರುವ ಈ ಅಧ್ಯಯನವು ಚಿಂತನೆಯ ಮತ್ತಷ್ಟು ವೈಚಾರಿಕ ಪರಂಪರೆಯ ಜೀವಂತಿಕೆಯನ್ನು ಪ್ರಶ್ನಿಸುತ್ತದೆ. ಅದನ್ನು ಪಾಶ್ಚಿಮಾತ್ಯ ತಾತ್ತ್ವಿಕ ಸಂವಾದಗಳ ಗ್ರಹಿಕೆ ಮತ್ತು ದೃಷ್ಟಿಕೋನಗಳನ್ನು ಸಮಕಾಲೀನತೆಯ ಮೂಲಾಂಶಗಳೊಂದಿಗೆ ಮರುನೆಲೆಗೊಳಿಸಿ ಮರುವ್ಯಾಖ್ಯಾನಿಸುವ ಅಗತ್ಯತೆ ಇದೆ ಎನಿಸುತ್ತದೆ. ಸಂಶೋಧಕರೇ ಹೇಳುವಂತೆ; 'ಈ ಅಧ್ಯಯನದಲ್ಲಿ ಮಹಿಳಾ ಚಿಂತನೆಯ ತಾತ್ತ್ವಿಕತೆಯನ್ನು ವಿಮರ್ಶಕಿಯರು ಹೇಗೆ ರೂಪಿಸುತ್ತಿದ್ದಾರೆ ಎಂಬುದನ್ನು ಅವರು ಅನುಸರಿಸುವ ಒಜಣಖಂಜಅಟಅಂಥಿಯ ಮೂಲಕ ಗ್ರಹಿಸಲಾಗಿದೆ' ಎನ್ನುವ ಮಾತು ಸಮಕಾಲೀನತೆಯ ಸಾಹಿತ್ಯ ವಿಮರ್ಶಾಕೃತಿಯಿಂದ ಹೊರಡುವ ವರ್ತಮಾನದ ವಿಘಟಿತ ಚಿಂತನೆಗಳನ್ನು ಅನುಸಂಧಾನವಾಗಿ ಗಮನಿಸಲಾಗಿದೆ. ಹಾಗೆಯೇ ವರ್ತಮಾನದ ವಿಮರ್ಶೆಯ ಕಡೆಗೆ ಅಭಿಮುಖಿಯಾದ ಒಂದು ಸಮಕಾಲೀನ ಶೋಧಕ ಪಥ್ಯವನ್ನು ಒಂದು ಬಗೆಯ ಸಾಂಸ್ಕೃತಿಕ ಸಂವಾದಗಳ ವಿಸ್ತರಣೆಯಾಗಿ ಪರಿಗಣಿಸುವ ಸಾಧ್ಯತೆಯಿದೆ. ಹಾಗಾಗಿ ಇದೊಂದು ಅಪೂರ್ವವಾದ ಚರ್ಚೆಯಾಗಿದೆ. ಅದು ಆಕರಗಳ ಮೂಲಕ ಪರ್ಯಾಯಗಳಿಗಾಗಿ ನಡೆಸುವ ಹೋರಾಟ, ಗತಿಸಿದ ಗತದ ಪುನರುಜ್ಜೀವನಕ್ಕಾಗಿ ಪ್ರಯತ್ನಸುವ ಐತಿಹಾಸಿಕ ಬೌದ್ಧಿಕ ಕಸರತ್ತಾಗದೆ, ವಾಸ್ತವವಾಗಿ, ಸ್ವತಃ ಜೀವಂತವಾಗಿರುವ ಧ್ವನಿಗಳನ್ನು ಕೇಳಿಸಿಕೊಳ್ಳುವ ಒಂದು ಪ್ರಯತ್ನವಾಗಿದೆ. ಆದರೆ ಏಕ ಸ್ವಾಧೀನಗೊಳಿಸುವ ಐತಿಹಾಸಿಕ ಪ್ರಬಲ ಶಕ್ತಿಗಳಿಂದ ಮಹಿಳಾ ಚಿಂತನೆ ಅವಜ್ಞೆಗೊಳಗಾಗಿದೆ. ಇಂಥ ರೂಢಿಗಳ ಹಿನ್ನೆಲೆಯಲ್ಲಿರುವ ದೃಢನಿಶ್ಚಯವೆಂದರೆ ನಮ್ಮ ವಾಸ್ತವತೆಯನ್ನು ಎದುರಿಸುವ ಕ್ರಮವನ್ನು ಆಕರಗಳು ನಮಗೆ ತೋರಿಸುತ್ತವೆ ಎನ್ನುವುದು.ಹಿನ್ನೆಲೆ ಯಾವುದೇ ಇರಲಿ ಬೌದ್ಧಿಕ ನಿಲುವಿನ ಮೌಲ್ಯವನ್ನು ನಿರಾಕರಿಸುವುದಿಲ್ಲ ಎಂಬುದನ್ನು ಗುರುತಿಸುವುದು ಅವಶ್ಯಕ. ಎಲ್ಲಕ್ಕಿಂತ ಮಿಗಿಲಾಗಿ, ಆಧುನಿಕ ಜಗತ್ತಿನ ಸಂಕೀರ್ಣತೆಗಳ ಹರವು ಮತ್ತು ಆಳವನ್ನು ಪರಿಗಣಿಸಿ ವಿವಿಧ ವೈಚಾರಿಕ ಮತ್ತು ತಾತ್ತ್ವಿಕ ಸಂಪ್ರದಾಯ – ಮಾರ್ಕ್ಸ್‌ವಾದಿ – ಲೋಹಿಯಾವಾದಿ – ಅಂಬೇಡ್ಕರ್‌ವಾದಿ – ಗಾಂಧಿ – ಪೆರಿಯಾರ್ ಇವರ ಆಲೋಚನೆಗಳನ್ನು ಹಾಗೂ ವಿಭಿನ್ನ ಸೈದ್ಧಾಂತಿಕ ನಿಲುವುಗಳನ್ನು ಗುರುತಿಸಿ ಸಮಗ್ರಗೊಳಿಸುವ ಅವಶ್ಯಕತೆ ಇದೆ. ಕೆಲ ಚಿಂತಕರು ಭಾವಿಸಿರುವಂತೆ ಬೌದ್ಧಿಕ ಕಾಠಿಣ್ಯತೆನ್ನು, ವಿರೋಧಿ ನಿಲುವುಗಳ, ವೈರುದ್ಧ್ಯಾತ್ಮಕ ಚಿಂತನೆಯ ವಿನ್ಯಾಸಗಳನ್ನು ಏಕೀಕರಿಸುವ ಒಲವನ್ನು ಏಕಕಾರಿಯಾಗಿ ಪ್ರತಿಪಾದಿಸುವಂತಿದೆ.ಅಂತೆಯೇ ಅತ್ಯಂತ ಸರಳ ಮನೋಭಾವದ ಸಾರಸಂಗ್ರಹ ತತ್ತ್ವವೆಂದು ತಿರಸ್ಕರಿಸಬಹುದಾದದ ಸಾಧ್ಯತೆಯೂ ಇದೆ.ವೈಶಾಲ್ಯತಾವಾದಿಗಿಂತ ದೂರವಾಗಿ ಚರ್ಚೆಯ ನಿಲುವನ್ನು ಸಮರ್ಥಿಸುವ ವಿದ್ವಾಂಸರು ಬಹುವ್ಯಾಪ್ತಿಯಾಗಿರುವ ಸಮಾಜದ ವಿಜಾತೀಯತೆಯನ್ನು ಪರಿಗಣಿಸದಿರುವ ಅಪಾಯವೂ ಇರುತ್ತದೆ.ಆದರೆ ಬಹುತ್ವದ ತತ್ತ್ವವನ್ನು ಪ್ರಜ್ಞಾಪೂರ್ವಕವಾಗಿ ಆಗಲಿ ಅಥವಾ ಅಪ್ರಜ್ಞ ಪೂರ್ವಕವಾಗಿಯಾಗಲಿ ನಿರ್ಲಕ್ಷಿಸುವಂತಿಲ್ಲ ಮುಖ್ಯವಾಗಿ ಇದು ಚಿಂತಕರು ಏಕಜಗತ್ತಿನ ವ್ಯವಸ್ಥೆ ಅಥವಾ ಚಿಂತನ ವ್ಯವಸ್ಥೆಯನ್ನು ವಿಜಾತೀಯ ಜಗತ್ತು ಅಥವಾ ಚಿಂತನಾಪಥದ ಲಕ್ಷಣಕ್ಕೆ ಹೆಚ್ಚು ಒತ್ತು ಕೊಡುವಂತಿರಬೇಕು.

ಒಂದು ನಿರ್ದಿಷ್ಟ ಅರ್ಥದಲ್ಲಿ ಕನ್ನಡದಲ್ಲಿಮಹಿಳಾ ಚಿಂತನೆಯು ಚಿಂತನೆಯ ವ್ಯವಸ್ಥಿತ ಪಥ ಅಲ್ಲ, ಅಥವಾ ಪಂಥವೂ ಅಲ್ಲ ಈ ಬಗೆಯ ಪುಟನುಡಿಗಳು ವೈಚಾರಿಕವಾಗಿ, ರೂಪಾತ್ಮಕವಾಗಿ ಬಿಡುತ್ತವೆ.ಬೌದ್ಧಿಕ ರಚನೆಗಳ ಸಂಯೋಜನೆ ಮತ್ತು ರೂಪಾತ್ಮಕ ಅಭಿವ್ಯಕ್ತಿ ನಮ್ಮ ಸಮಾಜದಂತಹ ಸಮಾಜದ ಸಮನ್ವಯ ಸ್ವಭಾವದೊಂದಿಗೆ ಸಾಮರಸ್ಯ ಸಾಧಿಸುತ್ತವೆ.ಇಲ್ಲಿಯೇ ಒತ್ತುಕೊಟ್ಟು ಹೇಳುತ್ತಿರುವುದೇಕೆಂದರೆ ಪ್ರಜ್ಞಾಪೂರ್ವಕವಾಗಿ ರೂಪಿಸಿದ ಸೈದ್ಧಾಂತಿಕ, ತಾತ್ತ್ವಿಕ ಚಿಂತನೆ ಯಾವುದೇ ರೀತಿಯಲ್ಲೂ ನಿಕೃಷ್ಟವಲ್ಲದ ಒಂದು ಬೌದ್ಧಿಕ ಆಯಾಮವನ್ನು ರೂಪಾತ್ಮಕ ಪ್ರತಿನಿಧೀಕರಣಗಳು ಹೊಂದಿರುತ್ತವೆ ಎಂಬುದು ಈ ಅಧ್ಯಯನದ ಮೂಲಭೂತ ನಿಲುವುಗಳು ಆಗಬೇಕಾಗಿದೆ.

ಮಹಿಳಾ ಚಿಂತನೆಯನ್ನು ಅವಲೋಕಿಸುವಾಗ ಚಾರಿತ್ರಿಕ ಅಧ್ಯಯನವನ್ನು ಬೌದ್ಧಿಕ ತೀವ್ರತೆ ಮತ್ತು ವಿವೇಚನೆಗೆ ಸೂಚನೆಯೆಂಬಂತೆ ಹಬ್ಬಿಸಿದಂತೆ ಈ ಮೇಲಿನ ಅಧ್ಯಯನಗಳು ಇವೆ. ವಿಜಯಾದಬ್ಬೆ, ಸುಮಿತ್ರಾಬಾಯಿ, ಎಚ್.ಎಸ್. ಶ್ರೀಮತಿ, ಎಂ.ಎಸ್. ಆಶಾದೇವಿ, ವೀಣಾ ಬನ್ನಂಜೆ, ಬಿ.ಯು.ಸುಮಾ, ಸಬಿತಾ ಬನ್ನಾಡಿ, ಮೀನಾಕ್ಷಿ ಬಾಳಿ ಇವರ ವಿಮರ್ಶಾ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿರುವುದು ಆಸಕ್ತಿ ಮೂಡಿಸುವ ಸಂಗತಿಯೂ ಆಗಿದೆ.ಅಲ್ಲದೆ ಅದು ರೂಪಾತ್ಮಕ ಬಗೆಯ ಚರ್ಚೆಗೆ ಸ್ಫೂರ್ತಿಯನ್ನು ಒದಗಿಸಿದಂತೆಯೂ ಇದೆ.ಬಹುಮುಖ್ಯವಾಗಿ ಮಲ್ಲಿಕಾ ಘಂಟಿ, ನೇಮಿಚಂದ್ರ, ಎಚ್.ಎಸ್. ಅನುಪಮಾ ಇಂಥವರ ಪ್ರಜಾಸತ್ತಾತ್ಮಕ ಬೌದ್ಧಿಕ ಮಾದರಿಗಳೆನಿಸುವ ಚಿಂತನೆಯ ನಿಲುವುಗಳ ಶೋಧ ನಿಜವಾಗಿಯೂ ಒಂದು ಬಗೆಯ ಗಂಭೀರ ಬೌದ್ಧಿಕ ಕ್ರಿಯೆಯಾಗಿರುತ್ತದೆ.ಈ ತನಕ ಕೇಳರಿಯದ ಚರ್ಚಿತ ಹೊಸ ಧ್ವನಿಗಳಿಗೆ ಅನುವು ಮಾಡಿಕೊಡುವ ಪ್ರಯತ್ನವೂ ಆಗುತ್ತದೆ.ಅಂತಹ ಪ್ರಯತ್ನವನ್ನು ಮುಂದಿನ ಅಧ್ಯಯನಗಳಲ್ಲಿ ಕೈಗೆತ್ತಿಕೊಳ್ಳಬಹುದಾಗಿದೆ.ಆ ಕಾರಣಕ್ಕಾಗಿ ಇದೊಂದು

[1] ಸುಮ ಎಚ್.ಎಸ್. ಕನ್ನಡ ವಿಮರ್ಶೆಯಲ್ಲಿ ಮಹಿಳಾ ಚಿಂತನೆಯ ತಾತ್ವಿಕ ಆಯಾಮಗಳು, ಪು ೫–೬.

ಮುಕ್ತಾಯವಾಗಿರದ ಕನ್ನಡ ಮಹಿಳಾ ಚಿಂತನ ಸಾಹಿತ್ಯದ ಅವಲೋಕನ ಎಂಬುದನ್ನು ಒಪ್ಪಿಕೊಂಡು ಈಗ ತಾನೇ ಪ್ರಸ್ತಾಪಿಸಿದ ಚಿಂತಕಿಯರ ಬಹುತ್ವದ ತಾತ್ತ್ವಿಕ ಆಕೃತಿಗಳೆನಿಸುವ ಚಿಂತನಾತ್ಮಕ ಕೃತಿಗಳ ಅಧ್ಯಯನ ಕ್ರಮಕ್ಕೆ ಮುಂದಿನ ದಿನಗಳಲ್ಲಿ ಅವಕಾಶ ಒದಗಿಸಿಕೊಡುವ ಪ್ರಯತ್ನ ಮಾಡಬಹುದು.

"ಒಟ್ಟಾರೆ ಕನ್ನಡ ವಿಮರ್ಶೆಯಲ್ಲಿ ಮಹಿಳಾ ವಿಮರ್ಶೆಯನ್ನು ಕುರಿತ ಅಲಕ್ಷಿತ ಧೋರಣೆಯಿದೆ. ಈ ಅಲಕ್ಷಿತ ಧೋರಣೆಯ ಪರಿಣಾಮವಾಗಿ ಮಹಿಳಾ ವಿಮರ್ಶೆಯ ಕುರಿತಾಗಿ ಸಾರ್ವಜನಿಕ ಚರ್ಚೆಯಿದ್ದರೂ ಸಂಶೋಧನೆಯಲ್ಲಿ ಮಹಿಳಾ ವಿಮರ್ಶೆಯನ್ನು ಆಕರವಾಗಿಸಿಕೊಂಡು ನಡೆದಿರುವ ಚರ್ಚೆಗಳು ಕಡಿಮೆ, ಆದ್ದರಿಂದ ಮಹಿಳಾ ವಿಮರ್ಶೆಯು ಕನ್ನಡ ವಿಮರ್ಶೆಗೆ ನೀಡಿರುವ ಹೊಸ ಆಯಾಮಗಳನ್ನು ಶೋಧಿಸುವುದು ಹಾಗೂ ಕನ್ನಡ ವಿಮರ್ಶೆಯಲ್ಲಿ ಮಹಿಳಾ ವಿಮರ್ಶೆಯ ವಿಶಿಷ್ಟತೆಯನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ"[೨] ಎಂದು ಹೇಳಿರುವುದು ತಾತ್ತ್ವಿಕ/ವೈಚಾರಿಕ ಆಯಾಮಗಳೊಂದಿಗೆ ಅನುಭವ/ಅಸ್ತಿತ್ವಾತ್ಮಿಕ ಅಂಶಗಳನ್ನು ಒಗ್ಗೂಡಿಸುವ ಪ್ರಯತ್ನದಂತೆ ಕಾಣುತ್ತದೆ. ಜ್ಞಾನ ವ್ಯವಸ್ಥೆಯ ಮೌಲ್ಯವನ್ನು ನಂಬಿ ಮಹಿಳಾ ಚಿಂತಕಿಯರು ಒಂದು ಕಾರಣಬದ್ಧ ಕ್ರಮದಲ್ಲಿ ಶ್ರೇಣಿಕರಣದ ಹಿಂಸೆಯನ್ನು ಪ್ರತಿಭಟಿಸಿದ್ದಾರೆ. ಶ್ರಮದಾಯಕ ಕ್ರಿಯೆಯ ಮೂಲಕವೇ ಇಲ್ಲಿನ ಚಿಂತನಾತ್ಮಕ ಪರಿಕಲ್ಪನೆಗಳು ದುಸ್ತರವಾದ ವರ್ತಮಾನ ಮತ್ತು ಅನಿಶ್ಚಿತ ಭವಿಷ್ಯದೊಡನೆ ಒಂದು ಸಂಧಾನಕ್ಕೆ ಬರಬೇಕಾದ ಅನಿವಾರ್ಯತೆ ಇರುವುದರಿಂದ ಚಿಂತನ ಸಾಹಿತ್ಯದ ಪರಿಕಲ್ಪನೆ ಗುರುತರ ಅಸ್ತಿತ್ವದ ಪ್ರಶ್ನೆ, ಚರಿತ್ರೆ ಮೊದಲಾದವುಗಳನ್ನು ಪ್ರಸ್ತುತ ದಿನಮಾನಗಳಲ್ಲಿ ಮುಂದಿನ ಸಂಶೋಧನ ಬರಹಗಳಲ್ಲಿ ಚರ್ಚಿಸಬಹುದು.ಹಾಗಾಗಿ, ಕನ್ನಡ ಮಹಿಳಾ ಚಿಂತನ ಸಾಹಿತ್ಯ ಎನ್ನುವ ಬಹುಕೇಂದ್ರಿತ ಪ್ರಜ್ಞೆಯನ್ನು, ಸಾಂಸ್ಕೃತಿಕ ನಿಲುವಿನ ವೈಶಿಷ್ಟ್ಯತೆನ್ನು ನಿರ್ದಿಷ್ಟತೆಯಲ್ಲಿ, ಸೈದ್ಧಾಂತಿಕ ನಿಲುವಾಗಿಸದೆ ಮತ್ತು ಅದಕ್ಕೆ ವ್ಯಕ್ತಿವಾದದಂತೆ ಚರ್ಚೆ ಮಾಡಿರುವ ಆಲಿಷ್ಕೃತ ದರ್ಶನವನ್ನು ಮರುಭಂಜಕಕ್ಕೆ ಒಳಗಾಗಿಸಬೇಕಾದ ಅನಿವಾರ್ಯತೆ ಇದೆ.

## ಪರಾಮರ್ಶನ ಕೃತಿಗಳು


೧. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಕೇಶವ ಶರ್ಮ. ಕೆ, ಸ್ತ್ರೀವಾದಿ ಚಿಂತನೆಗಳು (ಸಂ), ಡಾ. ಹಾ. ಮ. ನಾಗಾರ್ಜುನ, ದೇಸಿ ಪುಸ್ತಕ, ವಿಜಯನಗರ, ಬೆಂಗಳೂರು

೩. ಪ್ರಭುಸ್ವಾಮಿ ಹೆಗ್ಗೊಠಾರ, ವಿಜಯಾದಬ್ಬೆ ಸಾಹಿತ್ಯ : ಒಂದು ಅಧ್ಯಯನ, ಜ್ಯೋತಿ ಪ್ರಕಾಶನ, ಮೈಸೂರು.

೪. ೪.ಸುಮ ಎಚ್.ಎಸ್., ಕನ್ನಡ ವಿಮರ್ಶೆಯಲ್ಲಿ ಮಹಿಳಾ ಚಿಂತನೆಯ ತಾತ್ವಿಕ ಆಯಾಮಗಳು, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ

೫. ೫.ತೇಜಸ್ವಿನಿ ನಿರಂಜನ, ಸೀಮಂತಿನೀ ನಿರಂಜನ (ಸಂ), ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು

೬. ೬.ಸುಮ, ಎಂ.ಎಸ್., ಆಶಾದೇವಿ ಅವರ ಸ್ತ್ರೀವಾದಿ ಚಿಂತನೆಯ ಸ್ವರೂಪ, ಅಪ್ರಕಟಿತ ಎಂ ಫಿಲ್ ಪ್ರಬಂಧ

೭. ಹಾಲತಿ ಸೋಮಶೇಖರ್(ಸಂ), ಮಹಿಳೆ – ಒಂದು ಚಿಂತನೆ, ವಿಸ್ಮಯ ಪ್ರಕಾಶನ, ಮೈಸೂರು.


[2]. ಸುಮ ಎಚ್.ಎಸ್. ಕನ್ನಡ ವಿಮರ್ಶೆಯಲ್ಲಿ ಮಹಿಳಾ ಚಿಂತನೆಯ ತಾತ್ವಿಕ ಆಯಾಮಗಳು, ಪು – ೬